ವನ್ನು ಕಟ್ಟಿಸದಿದ್ದ ಮೇಲೆ ಅಲ್ಲಿ ಬುನಾದಿಯನ್ನು ಹಾಕಿ ಏತಕ್ಕೆ ಬರಬೇಕಾಗಿತ್ತು ? ಅಲ್ಲಿ ಇದುವರೆಗೂ ಕೆಲಸವೇ ಪ್ರಾರಂಭವಾಗಿಲ್ಲ. ಅಲ್ಲಿ ಕಟ್ಟಡ ಕಟ್ಟಿದ ಮೇಲೆ ಬುನಾದಿ ಹಾಕಲು ಏನು ಉದ್ದೇಶ ಇತ್ತು ? ಈಗ ಇನ್ನೊಂದು ಏನಾಗಿದೆ ಎಂದರೆ, ಅದು ಜಿಲ್ಲಾ ಪರಿಷತ್ ವ್ಯಾಪ್ತಿಗೆ ಬರುತ್ತದೆ.

ಶ್ರೀ ಯು. ಭೂಪತಿ.—ವಿಜಯನಗರ ಉಕ್ಕಿನ ಕಾರ್ಖಾನೆಯಂತೆ ಆಯಿತು.

ಶ್ರೀ ಬಿ. ಸೋಮಶೇಖರ್.—ಈ ವರ್ಷ ೮೫ ಸಾವಿರ ರೂಪಾಯಿಗಳನ್ನು ಒದಗಿಸಿಕೊಟ್ಟಿದೆ. ಆದಷ್ಟು ತೀವ್ರವಾಗಿ ಈ ಕಟ್ಟಡವನ್ನು ಕಟ್ಟಿ ಮುಗಿಸಬೇಕೆಂದು ಜಿಲ್ಲಾ ಪರಿಷತ್‌ಗೆ ನಾವು ಆದೇಶ ನೀಡುತ್ತೇನೆ.

ಶ್ರೀ ಬಿ. ಹೆಚ್. ಪಾಟೀಲ್.—ಅಲ್ಲಿ ನಿಜವಾದ ಪರಿಸ್ಥಿತಿ ಏನಿದೆ ಎಂಬುದನ್ನು ತಿಳಿದುಕೊಳ್ಳಬೇಕು. ಟೆಕ್ನಿಕಲ್ ವಿಚಾರ ಬೇರೆ ಇದೆ. ಇದು ಹಾಗಿದೆ, ಇದು ಹೀಗಿದೆ, ಎಂದು ಆಲ್ಲಿಯ ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರು ಹೇಳುತ್ತಿದ್ದಾರೆ. ನೀವು ಅಲ್ಲಿ ಕಟ್ಟಡವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ? ಇದು ಜಿಲ್ಲಾ ಪರಿಷತ್ತಿಗೆ ಬರುತ್ತದೆಂದು ನೀವು ಹೇಳಿದರೆ ಅದು ಆಗುವುದಿಲ್ಲ. ೪ ವರ್ಷ ಮಾಡುತ್ತೀರೋ, ೮ ವರ್ಷದಲ್ಲಿ ಮಾಡುತ್ತೀರೋ ಅಥವಾ ೧೦ ವರ್ಷದಲ್ಲಿ ಮಾಡುತ್ತೀರಿ ? ಯಾವಾಗ ಈ ಕಟ್ಟಡವನ್ನು ಕಟ್ಟಿ ಮುಗಿಸುತ್ತೀರಿ ?

ಶ್ರೀ ಬಿ. ಸೋಮಶೇಖರ್.—ಆದಷ್ಟು ಬೇಗ ಈ ಕಟ್ಟಡ ಕಟ್ಟಿಸಿಕೊಡುತ್ತೇವೆ.

ಶ್ರೀ ಬಿ. ಹೆಚ್. ಪಾಟೀಲ್.—ಕೆಲಸವನ್ನು ಎಂದು ಪ್ರಾರಂಭ ಮಾಡುತ್ತೀರಿ ? ಇದು ಸೆಪ್ಟೆಂಬರ್ ತಿಂಗಳು. ಈ ತಿಂಗಳಲ್ಲಿ ಪ್ರಾರಂಭ ಮಾಡಿಸುತ್ತೀರೋ ಅಥವಾ ಅಕ್ಟೋಬರ್ ತಿಂಗಳಲ್ಲಿ ಪ್ರಾರಂಭ ಮಾಡಿಸುತ್ತೀರೋ ? ಯಾವಾಗ ಪ್ರಾರಂಭ ಮಾಡಿಸುತ್ತೀರೆಂಬುದನ್ನು ಹೇಳಿ.....

ಅಧ್ಯಕ್ಷರು.— ಆದಷ್ಟು ಬೇಗ ಎಂದು ಮಂತ್ರಿಗಳು ಹೇಳಿದ್ದಾರೆ. ತಾವು ದಯವಿಟ್ಟು ಕೂಡಿ.

ಶ್ರೀ ಬಿ. ಹೆಚ್. ಪಾಟೀಲ್.—ಒಂದು ವರ್ಷದಲ್ಲಿ ಪೂರ್ತಿ ಕಟ್ಟಡವನ್ನು ಕಟ್ಟಿ ಮುಗಿಸುತ್ತೇವೆ ಎಂದು ಮಾನ್ಯ ಲೋಕೋಪಯೋಗಿ ಮಂತ್ರಿಗಳು ಆವತ್ತು ಆಶ್ವಾಸನೆ ಕೊಟ್ಟು ಬಂದಿದ್ದಾರೆ.

ಅಧ್ಯಕ್ಷರು.—ನಿಮಗೆ ಮಂತ್ರಿಗಳಿಂದ ಉತ್ತರ ಬೇಕೋ ಅಥವಾ ಕೆಲಸ ಆಗಬೇಕೋ ? ಆದಷ್ಟು ಬೇಗ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರಲ್ಲಾ, ತಾವು ದಯವಿಟ್ಟು ಕೂಡಿ.

ಚಿಕ್ಕನಾಯಕನಹಳ್ಳಿಯಲ್ಲಿ ಪ್ರಥಮ ದರ್ಜೆ ಮಹಾ ವಿದ್ಯಾಲಯ.

೬೬. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಉನ್ನತ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕನಾಯಕನಹಳ್ಳಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸಲು ಕೋರಿ ಮನವಿಗಳು ಬಂದಿರುವುದು ನಿಜವಲ್ಲವೆ ;

ಆ) ಪೆಲ್ಕುಂಡ ಕಾಲೇಜನ್ನು ಪ್ರಾರಂಭಿಸುವ ಅವಶ್ಯಕತೆಯ ಬಗ್ಗೆ ಶಿಕ್ಷಣ ಇಲಾಖೆಯಿಂದ ತಜ್ಞರ ವರದಿ ಸರ್ಕಾರಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಈವರೆಗೂ ಕಾಲೇಜನ್ನು ಮಂಜೂರು ಮಾಡದಿರುವುದಕ್ಕೆ ಕಾರಣಗಳೇನು,

ಈ) ಉನ್ನತ ವ್ಯಾಸಂಗ ಬಯಸಿ ಬರುವ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದರಿಂದ ಕೂಡಲೆ ಕಾಲೇಜನ್ನು ಮಂಜೂರು ಮಾಡಿ ಪ್ರಾರಂಭಿಸುವ ಬಗ್ಗೆ ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ) ಹೌದು.

ಆ) ಬಂದಿದೆ.

ಇ) ಇತರ ಮನವಿಗಳೊಂದಿಗೆ ಪರಿಶೀಲಿಸಲಾಗಿತ್ತು ಆದರೆ ಆರ್ಥಿಕ ಸಂಪನ್ಮೂಲಗಳ ಕೊರತೆಯಿಂದಾಗಿ ೧೯೮೬-೮೭ರ ಸಾಲಿನಲ್ಲಿ ಪ್ರ. ದ. ಕಾ. ಗಳನ್ನು ತೆರೆಯಲು ಮಂಜೂರಾತಿ ನೀಡಬಾರದೆಂದು ಸರ್ಕಾರ ತೀರ್ಮಾನವನ್ನು ಕೈಗೊಂಡ ಮೇರೆಗೆ ಯಾವ ಕಾಲೇಜು ಮಂಜೂರಾಗಲಿಲ್ಲ.

ಈ) ಇದರ ಬಗ್ಗೆ ಮುಂದೆ ಪರಿಶೀಲಿಸಲಾಗುವುದು.

ಮಾನ್ಯ ಅಧ್ಯಕ್ಷರೇ ಇಲ್ಲಿ ಒಂದು ತಪ್ಪಾಗಿದೆ. ಪ್ರಾಥಮಿಕ ಪ್ರೌಢ ಶಿಕ್ಷಣ ಮಂತ್ರಿಗಳಿಗೆ ಎಂದು ಹೇಳಿರುತ್ತಾರೆ. ನನ್ನಲ್ಲಿ ಸಂಬಂಧಪಟ್ಟ ವಿವರಗಳು ಇಲ್ಲ. ಆದ್ದರಿಂದ ಈ ಪ್ರಶ್ನೆಯನ್ನು ಕಾದಿರಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಲಕ್ಕಪ್ಪ.—ಪ್ರಶ್ನೆಯನ್ನು ತಿದ್ದುಪಡಿ ಮಾಡಿಕೊಂಡು ಕೇಳಿರುತ್ತೇನೆ. ಪ್ರಶ್ನೆಗೆ ಉತ್ತರವೂ ಕೂಡ ಬಂದಿರುತ್ತದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇದರಲ್ಲಿ ಏನು ತಪ್ಪಿದೆ ?

(ಗೊಂದಲ)

ಅಧ್ಯಕ್ಷರು.—ಮಾನ್ಯ ವಿರೋಧಪಕ್ಷದ ನಾಯಕರು ಏನು ಕೇಳುತ್ತಾರೋ ಕೇಳಲಿ, ಎಲ್ಲ ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಚಿಕ್ಕನಾಯಕನ ಹಳ್ಳಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸಲು ಕೋರಿ ಸರ್ಕಾರಕ್ಕೆ ಮನವಿಗಳು ಬಂದಿರುವುದು ನಿಜವಲ್ಲವೇ ಎಂದು ಕೇಳಿದ್ದಾರೆ. ಮೇಲ್ಕಂಡ ಕಾಲೇಜನ್ನು ಪ್ರಾರಂಭಿಸುವ ಅವಶ್ಯಕತೆಯ ಬಗ್ಗೆ ಶಿಕ್ಷಣ ಇಲಾಖೆಯಿಂದ ತಜ್ಞರ ವರದಿ ಸರ್ಕಾರಕ್ಕೆ ಬಂದಿದೆಯೇ ಎಂದೂ ಸಹ ಕೇಳಿದ್ದಾರೆ. ಹಾಗಿದ್ದಲ್ಲಿ ಈವರೆಗೂ ಕಾಲೇಜನ್ನು ಮಂಜೂರು ಮಾಡದಿರುವುದಕ್ಕೆ ಕಾರಣಗಳೇನು ಎಂದು ಮಾನ್ಯ ಸದಸ್ಯರು ಕೇಳಿರುವುದು, ಕೊನೆಯದಾಗಿ ಉನ್ನತ ವ್ಯಾಸಂಗ ಒದಗಿಸಿ ಬರುವ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದರಿಂದ ಕೂಡಲೇ ಕಾಲೇಜನ್ನು ಮಂಜೂರು ಮಾಡಿ ಪ್ರಾರಂಭಿಸುವ ಬಗ್ಗೆ ಸರ್ಕಾರದವರು ಕ್ರಮ ಕೈಕೊಳ್ಳುವರೇ ಎಂದು ಕೇಳಿದ್ದಾರೆ. ಇದೆಲ್ಲಾ ನಿಮಗೇ ಬರುತ್ತದೆ. ಇದರಲ್ಲಿ ಏನು ತಪ್ಪಿದೆ ಎಂದು ಕೇಳುತ್ತೇನೆ ?

ಶ್ರೀ ಜೀವರಾಜ ಆಳ್ವ.—ಮಾನ್ಯ ಅಧ್ಯಕ್ಷರೇ, ಹತ್ತು ನಿಮಿಷಗಳಲ್ಲಿ ವಿವರಗಳನ್ನು ಕೊಡುತ್ತೇನೆ. ಮೊದಲನೆ ಪ್ರಶ್ನೆಗೆ 'ಹೌದು', ಎರಡನೇ ಪ್ರಶ್ನೆಗೆ 'ಬಂದಿದೆ', ಮೂರನೇ ಪ್ರಶ್ನೆಗೆ 'ಇತರ ಮನವಿಗಳೊಂದಿಗೆ ಪರಿಶೀಲಿಸಲಾಗಿತ್ತು. ಆದರೆ ಆರ್ಥಿಕ ಸಂಪನ್ಮೂಲಗಳ ಕೊರತೆಯಿಂದಾಗಿ ೧೯೮೬-೮೭ರ ಸಾಲಿನಲ್ಲಿ ಪ್ರಥಮ ದರ್ಜೆ ಕಾಲೇಜುಗಳನ್ನು ತೆರೆಯಲು ಮಂಜೂರಾತಿ ನೀಡಬಾರದೆಂದು ಸರ್ಕಾರ ತೀರ್ಮಾನವನ್ನು ಕೈಗೊಂಡ ಮೇರೆಗೆ ಯಾವ ಕಾಲೇಜು ಮಂಜೂರಾಗಲಿಲ್ಲ.' ನಾಲ್ಕನೇ ಪ್ರಶ್ನೆಗೆ 'ಪರಿಶೀಲಿಸಲಾಗುವುದು' ಎಂದು ಉತ್ತರ ಕೊಟ್ಟಿರುತ್ತೇನೆ.

ಶ್ರೀ ಬಿ. ಲಕ್ಕಪ್ಪ —ಮಾನ್ಯ ಅಧ್ಯಕ್ಷರೇ, ಇದು ನನ್ನ ಕ್ಷೇತ್ರದ ಜನರ ಬಹುಮುಖ್ಯವಾದ ಬೇಡಿಕೆ. ಎರಡು ವರ್ಷಗಳ ಹಿಂದೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಶಿಕ್ಷಣ ಸಚಿವರಲ್ಲಿ ಮನವರಿಕೆ ಮಾಡಿಕೊಂಡು ಬಂದಿದ್ದೇವೆ. ಮನವಿಯನ್ನು ಸ್ವೀಕರಿಸಿ ಕನ್‌ಸಿಡರ್ ಮಾಡುತ್ತೇವೆಂದು ಹೇಳಿರುತ್ತಾರೆ. ಆದರೆ ಇದುವರೆವಿಗೂ ಕಾರ್ಯಗತವಾಗಿಲ್ಲ. ಇಲ್ಲಿ ಏನು ಹೇಳಿದ್ದಾರೆಂದರೆ ಸಂಪನ್ಮೂಲಗಳ ತೊಂದರೆಯಿಂದಾಗಿ ಯಾವ ಕಾಲೇಜನ್ನು ತೆರೆಯಲು ಮಂಜೂರಾತಿ ನೀಡಬಾರದೆಂದು ಸರ್ಕಾರ ತೀರ್ಮಾನವನ್ನು ಕೈಗೊಂಡಿದೆ ಎಂದು ಹೇಳಿದ್ದಾರೆ. ಆದರೆ ಈ ತೀರ್ಮಾನವಾದ ಮೇಲೆ ಆರು ಪ್ರಾಥಮಿಕ ಕಾಲೇಜುಗಳನ್ನು ಪ್ರಾರಂಭ ಮಾಡಿದ್ದಾರೆ. ಕಂಪ್ಲಿ, ಮಾನ್ವಿ, ತುರುವೇಕೆರೆ, ಯಲಬುರ್ಗ, ಇದೇ ಮುಂತಾದ ಕಡೆಗಳಲ್ಲಿ ಆರು ಕಾಲೇಜುಗಳನ್ನು ಪ್ರಾರಂಭ ಮಾಡಿದ್ದಾರೆ. ಇದಕ್ಕೆ ಹೇಗೆ ಸೌಲಭ್ಯಗಳು ಬಂತು ? ಚಿಕ್ಕನಾಯಕನ ಹಳ್ಳಿಯಲ್ಲಿ ಕಾಂಗ್ರೆಸ್ ಪಕ್ಷದವರು ಗೆದ್ದು ಬಂದಿದ್ದಾರೆಂದು ಇದಕ್ಕೆ ಆರ್ಥಿಕ ಮುಗ್ಗಟ್ಟು ಬಂದಿತೇ ?

ಶ್ರೀ ಜೀವರಾಜ ಆಳ್ವ.—ಕಳೆದ ಎರಡು ವರ್ಷಗಳಿಂದ ಪಕ್ಷಭೇದವಿಲ್ಲದೆ ಶಾಸಕರ ಕೋರಿಕೆ ಮೇರೆಗೆ ಪ್ರಥಮ ದರ್ಜೆ ಜೂನಿಯರ್ ಕಾಲೇಜುಗಳನ್ನು ಕೊಟ್ಟಿದ್ದೇವೆ. ಈ ವರ್ಷ ಕಾರಣಾಂತರ

ದಿಂದ ಯಾವುದೇ ಕಾಲೇಜನ್ನು ಕೊಡಬಾರದು ಎನ್ನುವ ನಿರ್ಧಾರ ಮಾಡಿ ವಿಶ್ವವಿದ್ಯಾನಿಲಯದಿಂದ ಶಿಫಾರಸ್ಸು ದೊರೆತ ಕೆಲವೇ ಕಾಲೇಜುಗಳನ್ನು ತೆರೆಯಲು ಅನುಮತಿ ಕೊಟ್ಟಿದ್ದೇವೆ. ಮಾನ್ಯ ಲಕ್ಕಪ್ಪನವರಿಗೆ ಭರವಸೆಯನ್ನು ಕೊಡುತ್ತೇನೆ, ಖಂಡಿತವಾಗಿಯೂ ಕಾಲೇಜು ಕೊಡುತ್ತೇವೆ, ಇಲ್ಲ ವೆಂದು ಹೇಳುವ ಪ್ರಶ್ನೆ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಕ್ಯಾಬಿನೇಟ್ ಡಿಸಿಷನ್ ತೆಗೆದುಕೊಂಡಿದ್ದೇವೆ, ಈ ವರ್ಷ ಯಾವುದೇ ಕಾಲೇಜನ್ನು ಕೊಡುವುದಿಲ್ಲವೆಂದು ಸ್ಪಷ್ಟವಾಗಿ ರಿಟನ್ ರಿಪ್ಲೈಯಲ್ಲಿ ಕೊಟ್ಟಿರುತ್ತೀರಿ. ಆದರೆ ಕಂಪ್ಲಿ, ಮಾನ್ವಿ ಕಡೆ ಉನ್ನತ ದರ್ಜೆ ಕಾಲೇಜನ್ನು ಹೇಗೆ ಕೊಟ್ಟಿರಿ ? ವಿಶ್ವವಿದ್ಯಾನಿಲಯದವರಂ ಪ್ರತಿಯೊಂದು ಕಾಲೇಜಿಗೂ ರೆಕಮೆಂಡೇಷನ್ ಕೊಡುತ್ತಾರೆ. ಹತ್ತು ರೆಕಮೆಂಡೇಷನ್ ಕೊಟ್ಟಿದ್ದರೆ, ಒಂದು ಆಥವಾ ಎರಡು ಕೊಡಬಹುದು. ಆದರೆ ಇಲ್ಲಿ ಪ್ರಶ್ನೆ ಏನೆಂದರೆ ಕ್ಯಾಬಿನೆಟ್ ಡಿಸಿಷನ್ ಪ್ರಥಮ ದರ್ಜೆ ಕಾಲೇಜುಗಳನ್ನು ಕೊಡಲಾಗದವುದಿಲ್ಲ, ಇಂಗ್ಲೀಷ್ ಮಿಡಿಯಂ ಶಾಲೆಗಳನ್ನು ಪ್ರಾರಂಭಿಸಲು ಅನುಮತಿ ಕೊಡುವುದಿಲ್ಲ ಎಂದು ಇರುವಾಗ ಇವುಗಳಿಗೆ ಹೇಗೆ ಅನುಮತಿಯನ್ನು ಕೊಟ್ಟಿರಿ ?

ಶ್ರೀ ಜೀವರಾಜ್ ಆಳ್ವ.—ಈ ಆರು ಕಾಲೇಜುಗಳಲ್ಲದೆ ಯಾವ ಕಾಲೇಜನ್ನು ಪ್ರಾರಂಭಿಸಬಾರ ದೆಂದು ಸಂಪುಟದ ತೀರ್ಮಾನವಾಗಿದೆ

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಉತ್ತರ ಬಹಳ ವಿರೋಧಾಭಾಸವಾಗಿದೆ. ಕನಕಪುರದಲ್ಲಿ ಕಾಲೇಜ್ ಇರಲಿಲ್ಲವೇ ? ಏತಕ್ಕೆ ಕೊಟ್ಟಿರಿ ? ಈ ರೀತಿ ಉತ್ತರ ಹೇಳುವುದು ಸರಿಹೋಗುವುದಿಲ್ಲ. ಮಕ್ಕಳಲ್ಲಿಯೂ ಪಂಚಿನೆಯೇ. ಯಾವ ಕ್ಷೇತ್ರದಿಂದ ಯಾರೇ ಗೆದ್ದುಬರಲಿ, ವಿದ್ಯೆಯನ್ನು ಕೊಡುವುದ ರಲ್ಲಿಯೂ ಈ ರೀತಿ ಮಾಡಬಾರದು.

೧೧–೩೦ ಎ. ಎಂ.

ಶ್ರೀ ಜೀವರಾಜ ಆಳ್ವ.— ೧೯೮೫-೮೬ರಲ್ಲಿ ಕೊಟ್ಟ ೬ ಪ್ರಥಮದರ್ಜೆ ಕಾಲೇಜುಗಳಲ್ಲಿ ಮೂರನ್ನು ವಿರೋಧ ಪಕ್ಷದ ಸದಸ್ಯರು ಪ್ರತಿನಿಧಿಸುವ ಕ್ಷೇತ್ರಗಳಲ್ಲಿ ಅಂದರೆ ಬಳ್ಳಾರಿ, ಸೊರಬ, ಹೊಸನಗರಗಳಲ್ಲಿ ಕೊಟ್ಟಿದ್ದೇವೆ ಈ ವರ್ಷ ಹಣಕಾಸಿನ ತೊಂದರೆ ಇದಂದರಿಂದ ಹೊಸದಾಗಿ ಕಾಲೇಜುಗಳನ್ನು ಕೊಡ ಲಿಲ್ಲ. ಬರುವ ವರ್ಷ ಚಿಕ್ಕನಾಯಕನ ಹಳ್ಳಿಗೆ ಪ್ರಥಮ ದರ್ಜೆ ಕಾಲೇಜು ಕೊಡುವುದನ್ನು ಖಂಡಿತ ಪರಿಶೀಲಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಅಧ್ಯಕ್ಷರೆ.....

ಅಧ್ಯಕ್ಷರು.— ನಿಮಗೆ ಕೆಲಸ ಆಗುವುದು ಬೇಕಾಗಿಲ್ಲ. ಪರಿಶೀಲನೆ ಮಾಡುತ್ತೇನೆಂದು ಹೇಳಿ ದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಕೆಲಸ ಆಗುವುದು ಅಷ್ಟೇ ಪ್ರಶ್ನೆ ಅಲ್ಲ. ಅದರ ಜೊತೆ ಯಲ್ಲಿ ಅವರು ಹೇಳುವುದರಲ್ಲಿ ಸತ್ಯಾಂಶ ಇರಬೇಕು. ಸತ್ಯಾಂಶವನ್ನು ಹೇಳಬೇಕು. ಒಂದು ಕಡೆ ಎಷ್ಟು ಕೇಳಿದರೂ ಕೊಡುವುದಿಲ್ಲ, ಇನ್ನೊಂದು ಕಡೆ ತಮ್ಮ ಮನಸ್ಸಿಗೆ ಬಂದ ಹಾಗೆ ಕೊಡುತ್ತಾರೆ. ಎಲ್ಲಿ ಪ್ರೆಷರ್ ಬರುತ್ತದೋ, ಎಲ್ಲಿ ಅವರಿಗೆ ಬೇಕೋ ಅಂಥ ಕಡೆ ಕೊಡುತ್ತಾರೆ. ಎಲ್ಲಿ ನ್ಯಾಯಯುತವಾದ ಬೇಡಿಕೆ ಇರುತ್ತದೆಯೋ ಅಲ್ಲಿ ಕೊಡುವುದಿಲ್ಲ.

ಅಧ್ಯಕ್ಷರು.— ತಾವು ಕುಳಿತುಕೊಳ್ಳಿ, ಹೇಳುತ್ತೇನೆ.

ಶ್ರೀ ಬಿ. ಲಕ್ಕಪ್ಪ.— ಆರು ಕಾಲೇಜುಗಳನ್ನು ಮಂಜೂರ್ಮಾಡುವುದಕ್ಕೆ ವಿಶ್ವವಿದ್ಯಾನಿಲಯದ ಅಫಿಲಿಯೇಷನ್ ಇದುವರೆಗೆ ಬಂದಿಲ್ಲ. ಆದರೂ ಮಂಜೂರ್ಮಾಡಿದ್ದೀರಿ ನಮ್ಮ ತಾಲ್ಲೂಕಿನಲ್ಲಿ ೮ ಪ್ರೀಯೂನಿವರ್ಸಿಟಿ ಕಾಲೇಜುಗಳಿವೆ. ಅಲ್ಲಿಂದ ಹೊರಗೆ ಬರತಕ್ಕ ವಿದ್ಯಾರ್ಥಿಗಳಿಗೆ ಬಿ.ಎ, ಬಿ.ಎಸ್ಸಿ ಗೆ ಸೇರಲು ಪ್ರಥಮ ದರ್ಜೆ ಕಾಲೇಜು ಇಲ್ಲ. ಅಲ್ಲಿ ಒಂದು ಲಕ್ಷದ ೮೦ ಸಾವಿರ ಜನಸಂಖ್ಯೆ ಇದೆ. ಇದು ನನ್ನ ಕ್ಷೇತ್ರದ ಪ್ರಮುಖ ಬೇಡಿಕೆ.

ಅಧ್ಯಕ್ಷರು.— ಖಂಡಿತ ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದಾರೆ. ನೀವು ಬಾಷಣ ಮಾಡು ವುದು ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅವರೇನು ಮಂತ್ರಿಯಿಂದ ಹಣ ಕೊಡುತ್ತಾರೆಯೇ ? ಎಲ್ಲಿ ಬೇಕಾಗಿಲ್ಲಿವೋ ಅಂಥ ಕಡೆ ಕೊಡುತ್ತಾರೆ. ಬೇಕಾದ ಕಡೆ ಕೊಡುವುದಿಲ್ಲ. ವಿಶ್ವವಿದ್ಯಾನಿಲಯ ಶಿಫಾರಸ್ಸು ಮಾಡಿದ ಕಡೆ ಕೊಡುವುದಿಲ್ಲ. ಕಾಲೇಜುಗಳು ಇದ್ದ ಕಡೆಯೇ ಮತ್ತೆ ಕೊಡುತ್ತಾರೆ. ನಾವೇನು ಇವರನ್ನು ಭಿಕ್ಷೆ ಬೇಡುವುದಕ್ಕೆ ಬಂದಿದ್ದೇವೆಯೇ ? ನಾವೇನು ಭಿಕಾರಿಗಳೇ ಅವರಿಗೆ ಬೇಕಾ ಬೇಕಾದಥಂವರಿಗೆ ಅವರ ಪಕ್ಷಕ್ಕೆ ದವರಿಗೆ ಕೊಡುತ್ತಾರೆ. ನಾವು ಜನರ ಸಲವಾಗಿ ಮಕ್ಕಳ ಸಲುವಾಗಿ ಕೇಳುತ್ತೇವೆ.

ಅಧ್ಯಕ್ಷರು.— ನೀವು ಮತ್ತೆ ರಾಜಕೀಯ ಭಾಷಣ ಶುರು ಮಾಡಿದಿರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಈ ಉತ್ತರವನ್ನು ನೋಡಿ ಸರಿಯಾಗಿ ಅರ್ಥ ಮಾಡಿ ಕೊಂಡರೆ ಗೊತ್ತಾಗುತ್ತದೆ ಯಾರು ರಾಜಕೀಯ ಮಾಡುತ್ತಿದ್ದಾರೆಂದು.

ಅಧ್ಯಕ್ಷರು.— ಖಂಡಿತ ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಈಗ ಏತಕ್ಕೆ ಮಾಡಬಾರದು ? ವಿಶ್ವವಿದ್ಯಾನಿಲಯದ ಶಿಫಾರಸ್ಸು ಇಲ್ಲದೆ ಕೊಡಬಹುದು, ಕಾಲೇಜು ಇದ್ದಲ್ಲಿ ಕೊಡಬಹುದು. ಆದರೆ ಅಲ್ಲಿ ಕಾಲೇಜಿಲ್ಲ, ಅಂಥ ಕಡೆ ಏಕೆ ಕೊಡಬಾರದು ?

ಅಧ್ಯಕ್ಷರು.— ಅವರು ಸಮರ್ಪಕವಾಗಿ ಉತ್ತರಿಸಿದ್ದಾರೆ. ನಾನು ಮಂಂದಿನ ಪ್ರಶ್ನೆಗೆ ಹೋಗುತ್ತೇನೆ.

(ಗೊಂದಲ)

ಶ್ರೀ ಬಿ. ಲಕ್ಕಪ್ಪ.— ಇದು ನನ್ನ ತಾಲ್ಲೂಕಿನ ಮುಖ್ಯ ಪ್ರಶ್ನೆ. ನಾನು ಈ ಬಗ್ಗೆ ಅನೇಕ ಸಾರಿ ಮುಖ್ಯ ಮಂತ್ರಿಗಳ ಮತ್ತು ವಿದ್ಯಾ ಮಂತ್ರಿಗಳ ಮನೆ ಬಾಗಿಲಿಗೆ ಹೋಗಿದ್ದೇನೆ. ಆದರೂ ನ್ಯಾಯ ದೂರಕಿಲ್ಲ. ಈಗಲಾದರೂ ಮರಜೂರ್ಮಾಡಿದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ.ಡಾ॥ ಜೀವರಾಜ ಆಳ್ವ ರವರು ಮಂಜೂರ್ಮಾಡಿದರು ಎಂದು ಅವರನ್ನೇ ಕರೆದುಕೊಂಡು ಹೋಗಿ ಉದ್ಘಾಟನೆ ಮಾಡಿ ಸುತ್ತೇನೆ. ಆಗ ಅವರು ಜನರಿಗೆ ಏನು ಹೇಳುತ್ತಾರೋ ಹೇಳಲಿ. ಮಂಜೂರಾತಿ ನೀಡುವುದಾಗಿ ಸದನದಲ್ಲಿ ಘೋಷಣೆ ಮಾಡದಿದ್ದರೆ ಒಂಟಿ ಕಾಲಿನಲ್ಲಿ ನಿಂತಿದ್ದೇನೆ. ನಾನು ಕುಳಿತುಕೊಳ್ಳುವುದಿಲ್ಲ.

ಶ್ರೀ ಜೀವರಾಜ ಆಳ್ವ.— ಮಾನ್ಯ ಲಕ್ಕಪ್ಪನವರ ಭಾವನೆಗಳನ್ನು ಒಲ್ಲೆ. ಹಿಂದೆ ಅವರು ನನ್ನ ಹತ್ತಿರ ಬಂದು ಮಾತನಾಡಿದ್ದರು. ನಾನು ಆಗಲೇ ಬಿಡಿಸಿ ಹೇಳಿದ ಹಾಗೇ, ಆ ಪಕ್ಷ, ಈ ಪಕ್ಷ, ವಿರೋಧ ಪಕ್ಷ ಎಂದು ನಾವು ತೀಮಾನ ತೆಗೆದುಕೊಂಡಿಲ್ಲ. ಈ ಸಾರಿ ಬಹಳಷ್ಟು ಹಣಕಾಸಿನ ಕೊರತೆ ಇದೆ. ಆದ್ದರಿಂದ ಯಾವುದೇ ಪ್ರಥಮ ದರ್ಜೆ ಕಾಲೇಜು ಅಥವಾ ಜೂನಿಯರ್ ಕಾಲೇಜು ಗಳನ್ನು ಕೊಡಬಾರದೆಂದು ಇದ್ದರೂ ಹೋದ ವರ್ಷ ಕೊಟ್ಟಂಥವುಗಳು ಕೆಲವು ಆರಂಭವಾಗದೆ ಇದ್ದಂತಹ ಅರು ಕಾಲೇಜುಗಳನ್ನು ಆರಂಭಿಸಿದ್ದೇವೆ. ಮಾನ್ಯ ಶ್ರೀ ಲಕ್ಕಪ್ಪನವರು ಹೇಳಿದ ಹಾಗೆ ೮–೧೦ ಕಾಲೇಜುಗಳೇನೂ ಇಲ್ಲ. ಚಿಕ್ಕನಾಯಕನಹಳ್ಳಿಯಲ್ಲಿ ಖಾಸಗಿ ಪ್ರಥಮ ದರ್ಜೆ ಕಾಲೇಜು ಇದೆ ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ತಮ್ಮ ಬೇಡಿಕೆ ಒಳ್ಳೆಯದು. ಖಂಡಿತ ಬರುವ ವರ್ಷ ಪರಿಶೀಲಿಸಿ ಕಾಲೇಜು ಕೊಡಿಸುವ ಬಗ್ಗೆ ಸೂಕ್ತ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಲಕ್ಕಪ್ಪ.— ಒಂದು ಕಾಲೇಜು ಇದೆ.....

ಅಧ್ಯಕ್ಷರು.— ನೀವು ಹೇಳುವುದು ಯಾವುದೂ ರೆಕಾರ್ಡ್ ಆಗುವುದಿಲ್ಲ.

ಶ್ರೀ ಬಿ. ಲಕ್ಕಪ್ಪ.— ಕೊನೆಯದಾಗಿ ಪ್ರಾರ್ಥಿಸುವುದು ಇಷ್ಟೆ. ಮುಂದಿನ ವರ್ಷ ಪ್ರಾರಂಭ ಮಾಡುವುದಾದರೂ ಈ ವರ್ಷವೇ ಮಂಜೂರಾತಿ ನೀಡುತ್ತೇನೆಂದು ಸದನದಲ್ಲಿ ಘೋಷಣೆ ಮಾಡಿದರೆ ಸಮಾಧಾನ.

ಅಧ್ಯಕ್ಷರು.— ಮಾಡುತ್ತಾರೆ, ಕುಳಿತುಕೊಳ್ಳಿ. ಇದು ಒಳ್ಳೆಯದಲ್ಲ. ಅವರು ಆಗಲೇ ಹೇಳಿದ್ದಾರೆ.

ಈಗ ಶ್ರೀ ಐ.ಬಿ. ಶಂಕರ್ ಅವರ ಪರವಾಗಿ ಶ್ರೀ ಓಂಕಾರ ಮೂರ್ತಿಯವರು ಹೆಚ್ಚಿನೇ ಪ್ರಶ್ನೆ ಕೇಳಿ.

ಶ್ರೀ ಕೆ. ಎಚ್. ಪಾಟೀಲ್.-- ಮಾನ್ಯ ಅಧ್ಯಕ್ಷರೆ, ಮಾನ್ಯ ಲಕ್ಕಪ್ಪನವರು ಹೇಳುವುದು ಛಲೋ ಬೇಡಿಕೆ ಎಂಬುದನ್ನು ಮಾನ್ಯ ಮಂತ್ರಿಗಳು ಒಪ್ಪಿದ್ದಾರೆ. ಆದ್ದರಿಂದ ಅವರು ಸದನಕ್ಕೆ ಹೇಳಬೇಕು. Next year we will grant ಎಂದು ಹೇಳಿದರೆ ಸಾಕು.

ಶ್ರೀ ಬಿ. ಲಕ್ಕಪ್ಪ.-- ಮಾನ್ಯ ಮುಖ್ಯಮಂತ್ರಿಗಳೂ ಆಶ್ವಾಸನೆ ಕೊಟ್ಟಿದ್ದಾರೆ. ಆ ಕ್ಷೇತ್ರದ ಮಕ್ಕಳಿಗೆ ಅನುಕೂಲವಾಗುತ್ತದೆ. ಆದ್ದರಿಂದ ದಯವಿಟ್ಟು ಪ್ರಾರಂಭ ಮಾಡಬೇಕು.

ಶ್ರೀ ಜೀವರಾಜ ಆಳ್ವ.-- ಅಧ್ಯಕ್ಷರೇ, ಜೂನಿಯರ್ ಕಾಲೇಜು ಅಂದರೆ ಈಗಲೇ ಆಶ್ವಾಸನೆ ಕೊಡಬಹುದು. ಆದರೆ ಫಸ್ಟ್ ಗ್ರೇಡ್ ಕಾಲೇಜ್ ಅವರು ಕೇಳುತ್ತಿರುವುದರಿಂದ ವಿಶ್ವವಿದ್ಯಾನಿಲಯದ ಒಪ್ಪಿಗೆ ಬೇಕಾಗುತ್ತದೆ. ಅದು ಬಂದಮೇಲೆ ಖಂಡಿತ ಮಾಡುತ್ತೇವೆ.

ಶ್ರೀ ಬಿ. ಲಕ್ಕಪ್ಪ.-- ಒಪ್ಪಿಗೆ ಇಲ್ಲದೆ ಮಂಜೂರು ಮಾಡಿದ್ದೀರಿ.

ಅಧ್ಯಕ್ಷರು.-- ಮಾನ್ಯ ಲಕ್ಕಪ್ಪನವರೇ, ನೀವು ಮಾತನಾಡಿದ್ದು ಏನೂ ರೆಕಾರ್ಡ್ ಆಗುವುದಿಲ್ಲ. ನೀವು (ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ) ಶ್ರೀ ಓಂಕಾರ ಮೂರ್ತಿಯವರ ಪ್ರಶ್ನೆಗೆ ಉತ್ತರ ಕೊಡಿ*

(ಶ್ರೀ ಬಿ. ಲಕ್ಕಪ್ಪನವರು ನಿಂತೇ ಇದ್ದರು.)

ಶ್ರೀ ಬಿ. ಲಕ್ಕಪ್ಪ.— ಈ ಸದನದಲ್ಲಿ ಮಂಜೂರು ಮಾಡಿದ್ದೇನೆ ಎಂದು ಘೋಷಣೆ ಮಾಡಬೇಕು.

ಅಧ್ಯಕ್ಷರು.— ನಿಮ್ಮೊಬ್ಬರದೇ ಈ ಮನೆ ಅಂದುಕೊಂಡಿರಾ ?

ಶ್ರೀ ಬಿ. ಲಕ್ಕಪ್ಪ.-- ನಾನು ಕುಳಿತಿಲ್ಲ.

ಅಧ್ಯಕ್ಷರು.-- ಕೂರದಿದ್ದರೆ ಹಾಗೆ ನಿಂತ್ಕೊಳ್ಳಿ. Nothing will be recorded. ಇಷ್ಟೆಲ್ಲಾ ಹೇಳಿದರೂ ನೀವು ಹೀಗೆ ಮಾಡ್ತಿರಿ ಅಂದರೆ.....

ಶ್ರೀ ಕೆ. ಎಚ್. ಪಾಟೀಲ್.-- ಅಧ್ಯಕ್ಷರೆ, ದಯವಿಟ್ಟು .....

ಅಧ್ಯಕ್ಷರು.-- ಮಾನ್ಯ ಪಾಟೀಲರೇ, ಏನ್ರಿ ಇದು ? ಎಲ್ಲರೂ ಎದ್ದು ಒಂಟಿ ಕಾಲಿನಲ್ಲಿ ನಿಂತು ಕೊಳ್ಳುತ್ತಾರೆ. ಹಾಗಾದರೆ ನಾನೇನು ಮಾಡಲಿ ?

ಶ್ರೀ ಎಂ. ಎಸ್. ಪಾಟೀಲ್.— ಅವರು ಏನು ವೈಯಕ್ತಿಕವಾದ ಕೆಲಸ ಕೇಳುತ್ತಿದ್ದಾರಾ ?

ಶ್ರೀ ಬಿ. ಲಕ್ಕಪ್ಪ.— ಅಧ್ಯಕ್ಷರೇ, ...

MR. SPEAKER.—Nothing will be recorded, whatever you say, will not be recorded. It will be expunged.

ಖಾಲಿ ಇರುವ ಉಪನ್ಯಾಸಕರ ಹುದ್ದೆಗಳು,

೫೨೭. ಶ್ರೀ ಐ.ಬಿ. ಶಂಕರ್ (ಚಿಕ್ಕಮಗಳೂರು).— ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕಮಗಳೂರಿನ ನಗರದಲ್ಲಿರುವ ಐ.ಡಿ.ಎಸ್.ಜಿ. ಸರ್ಕಾರಿ ಕಾಲೇಜಿನಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳು ಸರ್ಕಾರದವರ ಗಮನಕ್ಕೆ ಬಂದಿದೆಯೇ,

ಆ) ಸದರಿ ಉಪನ್ಯಾಸಕರ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು,

ಇ) ಕಳೆದ ಅಧಿವೇಶನದಲ್ಲಿ ಸದರಿ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಆಶ್ವಾಸನೆ ನೀಡಿದ್ದು ಸದರಿ ಆಶ್ವಾಸನೆಯನ್ನು ಪೂರೈಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

---

* (ಅಧ್ಯಕ್ಷರ ಅಪ್ಪಣೆ ಮೇರೆಗೆ ಮಾನ್ಯ ಲಕ್ಕಪ್ಪನವರು ಹೇಳಿದ ಮಾತುಗಳನ್ನು ದಾಖಲಿಸಲಿಲ್ಲ)